**ದಿನಾಂಕ 1.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು :- ಶ್ರೀ ಎನ್.ಎಂ. (ಶ್ರೀ ಟಿ.ಜಿ.ಅರ್.) ಪ್ರತಿವಾದಿಯರ ವಕೀಲರಿಂದ:**

ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನಿಪಿ.3 ನ್ನು ನನ್ನ ಅಕ್ಕನ ಮಗ ಪ್ರದೀಪ್‌ಕುಮಾರ್ ರವರು ಪಡೆದಿದ್ದಾರೆ ಎಂದರೆ ಸರಿಯಲ್ಲ. ನಿಪಿ.3 ನನ್ನ ತಂದೆಯ ಕುಟುಂಬದ ವಂಶವೃಕ್ಷ ಅಲ್ಲ ಎಂದರೆ ಸರಿಯಲ್ಲ.

ನಾನು ಪಾಂಡವಪುರ ತಾಲ್ಲೂಕಿನ ಪಟ್ಟಸೋಮನಹಳ್ಳಿ ಗ್ರಾಮಕ್ಕೆ ಕಳೆದ 10 ವರ್ಷಗಳ ಹಿಂದೆ ವಿವಾಹವಾಗಿರುತ್ತೇನೆ. ನನ್ನ ವಿವಾಹವನ್ನು ನನ್ನ ತವರು ಮನೆಯಿಂದ ಮಾಡಲಾಗಿದೆ ಎಂದರೆ ಸರಿ. ನನ್ನ ವಿವಾಹವನ್ನು ನನ್ನ ಚಿಕ್ಕಪ್ಪ ಮಾಡಿದ್ದು, ಆ ವೇಳೆಗೆ ನನ್ನ ತಂದೆ ಬದುಕಿರಲಿಲ್ಲ.

ನನ್ನ ಚಿಕ್ಕಪ್ಪನನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ನನ್ನ ತಾತ (ಚಿಕ್ಕಅರಸೇಗೌಡ) ರವರಿಗೆ ಪುಟ್ಟೇಗೌಡ (ನನ್ನ ತಂದೆ), ಸಣ್ಣಪ್ಪ (ನನ್ನ ಚಿಕ್ಕಪ್ಪ) ಮತ್ತು ಗೌರಮ್ಮ (ನನ್ನ ಅತ್ತೆ) ಎನ್ನುವ ಮಕ್ಕಳು ಇರುತ್ತಾರೆ. ಆ ಮೂರು ಜನರು ವಿವಾಹವಾಗಿದ್ದರು ಎಂದರೆ ಸರಿ. ಆ ಮೂವರು ಮರಣ ಹೊಂದಿರುತ್ತಾರೆ.

ನನ್ನ ತಂದೆ ನಾನು ಸೇರಿ ಒಟ್ಟು 5 ಜನ ಮಕ್ಕಳು ಎಂದರೆ ಸರಿ. ನನ್ನ ಚಿಕ್ಕಪ್ಪನಿಗೂ 5 ಜನ ಮಕ್ಕಳಿದ್ದು, ಅವರಲ್ಲಿ 3 ಜನ ಗಂಡು ಮಕ್ಕಳು ಮತ್ತು 2

ಜನ ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ಅತ್ತೆಗೆ 5 ಜನ ಮಕ್ಕಳಿದ್ದು, ಅವರಲ್ಲಿ 3 ಜನ ಹೆಣ್ಣು ಮಕ್ಕಳು ಮತ್ತು 2 ಗಂಡು ಮಕ್ಕಳು ಇರುತ್ತಾರೆ.

ನನ್ನ ತಂದೆ, ಚಿಕ್ಕಪ್ಪ ಮತ್ತು ಅತ್ತೆಯ ನಡುವೆ ಅಥವಾ ಅವರ ಕುಟುಂಬದವರ ನಡುವೆ ವಿಭಾಗವಾಗಿಲ್ಲ ಎಂದರೆ ಸರಿಯಲ್ಲ. ಅವರ ನಡುವೆ ವಿಭಾಗವಾಗಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಹಾಗಾಗಿ, ನನ್ನ ಚಿಕ್ಕಪ್ಪ ಮತ್ತು ಅತ್ತೆಯ ಕುಟುಂಬದವರಿಗೂ ಈ ಪ್ರಕರಣದ ದಾವಾಸ್ತಿಗಳಲ್ಲಿ ಸಮಾನವಾದ ಹಕ್ಕು ಇದೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಅವರ ಕುಟುಂಬದವರನ್ನು ಉದ್ದೇಶಪೂರ್ವಕವಾಗಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಹಾಗಾಗಿ, ಈ ದಾವಾದಲ್ಲಿ ಕೇಳಿರುವ ಪರಿಹಾರವನ್ನು ನಾನು ಕೋರಲು ಬರುವುದಿಲ್ಲ ಎಂದರೆ ಸರಿಯಲ್ಲ.

ದಾವಾಸ್ತಿಗಳನ್ನು ಹೊರತುಪಡಿಸಿ ಇತರ ಆಸ್ತಿಗಳು ಇದ್ದು ಅವುಗಳನ್ನು ಈ ಪ್ರಕರಣದಲ್ಲಿ ಉದ್ದೇಶಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ತಿ. ನರಸೀಪುರ ತಾಲ್ಲೂಕಿನ ಬನ್ನೂರು ಹೊಬಳಿಯ ಎಡಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.144/3 ರ 10 ಗುಂಟೆ, ಸರ್ವೆ ನಂ.121/4 ರ 3 ಗುಂಟೆ, ಸರ್ವೆ ನಂ.4/1 ರ 1 ಎಕರೆ 4 ಗುಂಟೆ, ಸರ್ವೆ ನಂ.4/2 ರ 9 ಗುಂಟೆ, ಸರ್ವೆ ನಂ.48/1 ರ 2 ಗುಂಟೆ, ಸರ್ವೆ ನಂ.49/1 ರ 13 ಗುಂಟೆ, ಸರ್ವೆ ನಂ.48/1 ರ 10 ಗುಂಟೆ, ಸರ್ವೆ ನಂ.142 ರ 1 ಎಕರೆ 5 ಗುಂಟೆ ಮತ್ತು

ಸರ್ವೆ ನಂ.144/2 ರ 1 ಎಕರೆ, ಖಾಲಿ ನಿವೇಶನ ಮತ್ತು ವಾಸದ ಮನೆ ಈ ಪ್ರಕರಣದಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ಆಸ್ತಿಗಳು ನನ್ನ ತಾತನ ಹೆಸರಿನಲ್ಲಿಯೇ ಇಲ್ಲಿಯವರೆಗೂ ಇವೆ ಎಂದರೆ ಸರಿಯಲ್ಲ. ಆ ಎಲ್ಲಾ ಆಸ್ತಿಗಳ ನಡುವೆ ಇಲ್ಲಿಯವರೆಗೂ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ಆ ಎಲ್ಲಾ ಆಸ್ತಿಗಳ ಬಗ್ಗೆ ನನಗೆ ಗೊತ್ತಿದ್ದರೂ ಕೂಡ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು,**
**ತಿ.ನರಸೀಪುರ**